ಬಾಗೆಪಲ್ಲಿಯಲ್ಲಿ ಬಸ್ಸು ನಿಲ್ದಾಣವನ್ನು ನಿರ್ಮಿಸುವುದು

೧೯೮೭. ಶ್ರೀ ಬಿ. ನಾರಾಯಣ ಸ್ವಾಮಿ (ಬಾಗೇಪಲ್ಲಿ). - ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಂದು ಸರಕಾರಿ ವಾಹನ ನಿಲ್ದಾಣ ಸ್ಥಾಪಿಸುವ ವಿಚಾರ ವೇನಾದರೂ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಈಗಾಗಲೇ ಕೈಗೊಂಡಿರುವ ಕ್ರಮಗಳೇನು? ಹಾಗೂ ಕೈಗೊಳ್ಳುವ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಹಾಗೂ ವಸತಿ ರಾಜ್ಯ ಸಚಿವರು).—

ಅ) ಇದೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಬಾಗೇಪಲ್ಲಿಯಲ್ಲಿ ಸೂಕ್ತವಾದ ನಿವೇಶನ ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು.

ಬೇಲೂರು ಪಟ್ಟಣಕ್ಕೆ ನೀರು ಸರಬರಾಜು ಬಗ್ಗೆ

೧೯೮೬. ಶ್ರೀ ಹೆಚ್ ಕೆ ಕುಮಾರ್ ಸ್ವಾಮಿ (ಬೇಲೂರು). —ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇಲೂರು ಪಟ್ಟಣದಲ್ಲಿ ನೀರಿಗೆ ತುಂಬಾ ತೊಂದರೆ ಇದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ನೀರು ಸರಬರಾಜಿಗಾಗಿ ೧೮ ಲಕ್ಷ ರೂಪಾಯಿ ಯೋಜನೆ ಮತ್ತು ಅಂದಾಜು ಮಾಡಿರುವುದು ನಿಜವೇ?

ಇ) ೧೯೮೬-೮೭ನೇ ಸಾಲಿನಲ್ಲಿ ಯೋಜನೆ ಮತ್ತು ಅಂದಾಜಿಗೆ ಒಪ್ಪಿಗೆ ಕೊಟ್ಟ ಹಣ ಬಿಡುಗಡೆ ಮಾಡಲಾಗುವುದೇ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಸ್ವಲ್ಪ ಪ್ರಮಾಣದ ತೊಂದರೆ ಇದೆ.

ಆ) ೧೭೪೩ ಲಕ್ಷ ರೂ.ಗಳು ಅಂದಾಜು ವೆಚ್ಚದಲ್ಲಿ ೩ನೇ ಹಂತ ಅಭಿವೃದ್ಧಿ ಯೋಜನೆಯನ್ನು ತಯಾರು ಮಾಡಲಾಗಿದೆ.

ಇ) ಇಲ್ಲ.

ಕೈಗಾರಿಕಾ ರಹಿತ ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ.

೧೯೮೭. ಶ್ರೀ ಬಸವರಾಜ್ ಪಾಟೀಲ್ (ಹುಮನಾಬಾದ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೈಗಾರಿಕಾ ರಹಿತ ಜಿಲ್ಲೆ ಎಂದು ಪರಿಗಣಿಸಿದ ಬೀದರ್ ಜಿಲ್ಲೆಯಲ್ಲಿ ಈಗ ಎಷ್ಟು ಕೈಗಾರಿಕೆಗಳು ಪ್ರಾರಂಭವಾಗಿವೆ ಹಾಗೂ ಅವು ಯಾವುವು ?

ಆ) ಅವು ಈಗ ಯಾವ ಹಂತದಲ್ಲಿವೆ ?

ಇ) ಪ್ರಾರಂಭಿಸಲಾದ ಕೈಗಾರಿಕೆಗಳಲ್ಲಿ ಕೇಂದ್ರ ಸರ್ಕಾರದಿಂದ ಪರವಾನಿಗೆ ಪಡೆದವುಗಳೆಷ್ಟು ಹಾಗೂ ರಾಜ್ಯ ಸರ್ಕಾರದವರ ಪರವಾನಿಗೆ ಹೊಂದಿದವುಗಳೆಷ್ಟು ಮತ್ತು ಅವುಗಳು ಯಾವ ಯಾವ ತಾಲ್ಲೂಕಿನಲ್ಲಿವೆ ?